## ಕಳೆದ ಸಂಚಿಕೆಯಲ್ಲಿ



ಇಳಿವಯಸ್ಸಿನ ಸೀತಾಲಕ್ಷ್ಮಿ–ಶಿವರಾಮಯ್ಯ ದಂಪತಿಯ ಸಂಜೆ ದಿನಗಳ ದಾಂಪತ್ಯ ಸದ್ದಿಲ್ಲದೆ ಸಾಗುತ್ತಿರುವಾಗ್ಗೆ, ಕೊರೊನಾ ಸೋಂಕು ಅವತರಿಸಬೇಕೆ? ಮನುಷ್ಯ ಮನುಷ್ಯರ ನಡುವೆ ಗೋಡೆಗಳನ್ನು ಏಳಿಸಿದ ಕೊರೊನಾ ಸೋಂಕು, ಸೀತಾಲಕ್ಷ್ಮಿ ಅವರ ಬದುಕಿನ ಏಕಾಂತವನ್ನು ಮತ್ತಷ್ಟು ಹೆಚ್ಚಿಸಿತು. ಶಿವರಾಮಯ್ಯನವರಿಗೆ ಸಕ್ಕರೆ ಕಾಯಿಲೆಯೊಂದಿಗೆ ರಕ್ತದೊತ್ತಡವೂ ಇತ್ತು. ತಮ್ಮನ್ನು ನೋಡಿಕೊಳ್ಳುವುದು ಹೆಂಡತಿಯ ಕರ್ತವ್ಯ ಎಂದು ಭಾವಿಸಿದಂತಿದ್ದ ಗಂಡನಿಂದ ಸೀತಮ್ಮ ಪ್ರೀತಿಯ ಮಾತುಗಳನ್ನು ನಿರೀಕ್ಷಿಸುವಂತಿರಲಿಲ್ಲ. ಪ್ರತಿಯೊಂದಕ್ಕೂ ಹೆಂಡತಿಯ ಮೇಲೆ ಅವಲಂಬನೆಯಾಗುತ್ತಿದ್ದ ಶಿವರಾಮಯ್ಯನವರು ಮದುವೆಯಾದ ದಿನದಿಂದಲೂ ಹೆಂಡತಿಯೊಂದಿಗೆ ಅತಿ ಸಲುಗೆಯಿಂದ ನಡೆದುಕೊಂಡವರಲ್ಲ. ಈಗಿನ ಕಾಲದ ಹೆಣ್ಣುಮಕ್ಕಳೊಂದಿಗೆ ತಮ್ಮನ್ನು ಹೋಲಿಸಿಕೊಂಡಾಗ ಸೀತಾಲಕ್ಷ್ಮಿ ಅವರಲ್ಲಿ ವಿಷಾದದ ಭಾವ ಸುಳಿಯುವುದು. ಮದುವೆಯಾದ ಹೊಸದರಲ್ಲಿ ಗಂಡನ ಸಿಡುಕುತನಕ್ಕೆ ತಾನು ಮಾತ್ರವಲ್ಲದೆ, ಮನೆಯಲ್ಲಿದ್ದ ಹೆಣ್ಣುಮಕ್ಕಳೆಲ್ಲ ಬಲಿಯಾಗುತ್ತಿದ್ದುದು ಸೀತಾಲಕ್ಷ್ಮಿ ಅವರಿಗೆ ನೆನಪಾಯಿತು.

ದಿನಾ ಅದೇ ಅಭ್ಯಾಸ ಮಾಡ್ಕಂಡ್ರೆ ಗೊಬ್ಬರದ ಗುಂಡಿ ಜೊತೇಲಿ ಮತ್ತೊಂದು ಗುಂಡಿ ಆಗುತ್ತೆ' ಎಂದು ಸಿಟ್ಟು ಮಾಡುತ್ತಾನೆ. ಅತ್ತಿಗೆ ಇಷ್ಟೆಲ್ಲಾ ಹೆದರುಪುಕ್ಕಲಿ ಆಗಬೇಕಾದ್ದಿಲ್ಲ ಎಂದು ಸೀತಾಲಕ್ಷ್ಮಿಗೆ ಅನಿಸುವುದಿದೆ. 'ಬೋಳಿಸಲಿ ತಲೆಕೂದಲು. ಒಂದು ಸಲ ತೀರಿಹೋಗಲಿ ಅವರ ಹಟ. ಏನಾಗುತ್ತಪ್ಪಾ? ಮತ್ತೆ ಹುಟ್ಟುತ್ತೆ ಕೂದಲು...' ಗಂಟಲಿಗೆ ಬಂದಿದ್ದನ್ನು ಬಾಯಲ್ಲಿ ಹೇಳುವ ಧೈರ್ಯ ಅವಳಿಗಿಲ್ಲ. ತಲೆ ಬೋಳಿಸುವುದಕ್ಕಿಂತ ಹೆಚ್ಚು ಇನ್ನೇನೋ ಅಂಜಿಕೆ ಅತ್ತಿಗೆಯನ್ನು ಕಾಡುತ್ತಿದೆ ಎಂದು ಅವಳ ಅನುಮಾನ. ಕುತ್ತಿಗೆ ಹಿಸುಕಿದರೆ? ಕೊಂದು ಕಾನಲ್ಲಿ ಬಿಸಾಕಿ ಹೋದರೆ? ಮಾನಭಂಗ ಮಾಡಿದರೆ? ಇರಬೇಕು ಇಂಥಾದ್ದೇನೋ ಸಂಶಯ.

'ತಪ್ಪು' ಅನ್ನುವಂತಿಲ್ಲ. ಬೀಗರ ಕುರಿತು ಏನೇನೋ ಕಥೆಗಳು ಹರಿದಾಡುತ್ತಿವೆ ಈ ಮನೆಯವರ ಬಾಯಿಯಲ್ಲಿ. ಶಿವರಾಮನ ಅಪ್ಪ ಪಂಚಾಯಿತಿಗೆ ಅಲ್ಲಿಗೆ ಹೋಗಿದ್ದರಲ್ಲ, ಅವರ ಮುಖ ಕಂಡಕೂಡಲೇ ನಾಲಿಗೆಗೆ ಬೆಲ್ಲ ಸವರಿಕೊಂಡು ಮಾತಾಡಿ, ಕಾಫಿಯೋ, ಮತ್ತೊಂದೋ ಕೊಟ್ಟು ಲಾಯ್ಬು ಉಪಚಾರ ಮಾಡಿ, ಅದರಲ್ಲಿ ಎಂತದೋ ಹಾಕಿ ಕೊಟ್ಟು, ಆಮೇಲೆ ಕಾಲು ಕೆರೆದು ಜಗಳ ತೆಗೆದು ಹೊಟ್ಟೆಯೊಳಗಿದ್ದ ಸಿಟ್ಟು ಕಾರಿಕೊಂಡಿದ್ದು. ಈ ಮನುಷ್ಯ ಸೋತು ಸುಣ್ಣವಾಗಿ ಮನೆಯ ಕಡೆ ಕಾಲೆಳೆದುಕೊಂಡು ಬರುವಾಗ ದಾರಿ ಮಧ್ಯ ಹೊಟ್ಟೆಗೆ ಬಿದ್ದಿದ್ದರ ನಂಜು ಏರಿ ಜೀವ ಕಳೆದುಕೊಂಡಿದ್ದು, ಹೀಗಿದ್ದೆಲ್ಲಾ ಪುಕಾರು. ಇರಬಹುದು ಏನೂ. ಹಳೆಯದನ್ನೆಲ್ಲಾ ನೆನಪಿಸಿಕೊಂಡು ಶಿವರಾಮನಿಗೆ ಒಮ್ಮೊಮ್ಮೆ ಗಣ ಮೈಮೇಲೆ ಬರುತ್ತಿತ್ತು. ಆಗೆಲ್ಲಾ ಕಮಲಾ ನಿರ್ಲಿಪ್ತೆಯಂತೆ ಹೇಳುತ್ತಿದ್ದಳು,

'ಮಸಲಾ ಅವರು ನನ್ನ ಚಿನ್ನ, ಬೆಳ್ಳಿ ಕೊಟ್ಟಿದ್ರೂಂತ್ಲೆ ಇಟ್ಕಾ. ಅದನ್ನೆಲ್ಲಾ ಹಾಕ್ಕೊಂಡು ನಾನೇನು ಮೆರವಣಿಗೆ ಹೋಗ್ತಿದ್ದಾ? ಟ್ರೆಜರೀಲಿ ಬೆಚ್ಚಗಿರ್ತಿತ್ತು, ಹೌದಾ, ಅಲ್ವಾ?'

'ಹಂಗಂತ? ನಿಂದೊಳ್ಳೇ ಕತೆ...'

'ತಡಿಯೋ, ಪೂರ್ತಿ ಕೇಳೋ. ಈಗ್ಲೂ ಟ್ರೆಜರೀಲಿ ಅದು ಇದೆ ಅಂದ್ಕೋ...'

'ಅಂದ್ಕಂಬಿಟ್ರೆ ಸೈಯಾ? ಕಥೆ ಕಟ್ಟಿ ಹೇಳ್ಬೇಡ ನೀನು...'

'ಇಲ್ಲಿರೋದು ಅಲ್ಲಿದೆ ಅಷ್ಟೇ. ಇಟ್ಗಂಡಿರ್ಲಿ ಬಿಡು. ಅದನ್ನ ನೋಡಿದಾಗ್ಲೆಲ್ಲಾ ಚೇಳು ಕಚ್ಚಿದ ಹಂಗಾಗ್ಬೇಕು ಅವ್ರಿಗೆ. ಅನ್ಯಾಯವಾಗಿ ಒಂದು ಹೆಣ್ಣಿನ ಹೊಟ್ಟೆ ಮೇಲೆ ಹೊಡೆದೆ ಅನ್ನಿಸ್ಬೇಕು. ಪುಣ್ಯ, ಪಾಪ ಅಂತ ತಲೆ ಹಾಳು ಮಾಡ್ಕೊಳ್ಳೋರಿಗೆ ನರಕದ ನೆನಪಾಗ್ಬೇಕು. ಅದೂ ಒಂಥರಾ ಶಿಕ್ಷೆ ಕಣೋ...'

'ಏ ಹೋಗೇ, ಕರಟು ಪುರಾಣ ಹೇಳ್ಬೇಡ ನೀನು. ಅದರಿಂದ ಮೂರು ಕಾಸಿನ ಪ್ರಯೋಜನ ಇಲ್ಲ'.

'ಹಾವು ಸಾಯಲಿಲ್ಲ, ಕೋಲು ಮುರಿಯಲಿಲ್ಲ' ಎನ್ನುವಂತೆ ಸದ್ಯಕ್ಕೆ ಕೈದಾಗುತ್ತಿತ್ತು ಮಾತುಕತೆ, ವಾದವಿವಾದ.

ಮೂರು ಸಂಜೆ ಆಗುವುದರೊಳಗೆ ಊಟಕ್ಕೆ ಬಳ್ಳೆ ಹಾಕುತ್ತಿದ್ದ ಕಾಲ. ಗಂಟೆ ಎಂಟಾಗುವುದರೊಳಗೆ ಹೆಂಗಸರು ಸೈತಾ ಹೆಪ್ಪು ಗಿಪ್ಪಿನ ಕೊನೆಯ ಕೆಲಸ ಮುಗಿಸಿ ಹಾಸಿಗೆ ಸೇರಿಕೊಳ್ಳುತ್ತಿದ್ದ ಕಾಲ. ಒಳಗೆಲ್ಲಾ ಓಡಾಡಲು ಚಿಮಣಿಬುಡ್ಡಿಯ ದೀಪ. ಮುಂಚೇಕಡೆಯಲ್ಲಿ ಕೊಕ್ಕೆಗೆ ತೂಗು ಹಾಕಿದ ಲಾಟೀನು. ಕೆಲಸ ಮುಗಿದ ಮೇಲೆ ಕುಗುರುತ್ತಾ ಕೂತಿರಲು ಕಾರಣ ಇಲ್ಲದಿದ್ದರೂ ಒಮ್ಮೊಮ್ಮೆ ಶುರುವಾಗುತ್ತಿತ್ತು ಪಟ್ಟಾಂಗ. ಹಳೇ ಪುರಾಣ ಬಿಚ್ಚಿಕೊಳ್ಳುತ್ತಿತ್ತು. ಹೊಗೆಸೊಪ್ಪಿನ ಅಮಲಿನ ಜೊತೆ ಶಿವರಾಮನ ಮನಸ್ಸಿನಲ್ಲೂ ಕಾವು ಏರುತ್ತಿತ್ತು. ಹೊರಗೆ ದಾಟಿ ಅಂಗಳದ ತುದಿಯ ತೆಂಗಿನಮರದ ಬುಡದಲ್ಲಿ ಕವಳದ ರಸ ತುಪ್ಪುವುದು. ಒಳಗೆ ಬಂದು ತಮಗೆ ಅನ್ಯಾಯ ಮಾಡಿದವರನ್ನು ನೇಣಿಗೇರಿಸುವ ಮಾತಾಡುವುದು, ಮತ್ತೆ ಬಾಯಿಗೆ ಅಡಿಕೆಹೋಳು ಎಸೆದುಕೊಂಡು, ಎಲೆಗೆ ಸುಣ್ಣ ಸವರಿ ಬಾಯಿಗೆ ಗಿಡಿದುಕೊಂಡು, ಎಡ ಅಂಗೈ ಕುಳಿಯಲ್ಲಿ ತಂಬಾಕಿನ ಚೂರನ್ನು ಸುಣ್ಣದೊಡನೆ ಮಿದಿಯುತ್ತಾ...

'ನೀನು ಬಂದ್ಮೇಲೆ ಒಂಚೂರು ವಾಸಿ ಕಣೇ. ಉರುಬು ಕಮ್ಮಿಯಾಗಿದೆ. ಅವನನ್ನ ಅಂಕೇಲಿಟ್ಕೋಬೇಕು ನೀನು...'

ವೆಂಕಮ್ಮನ ಉಪದೇಶ ಕೇಳಿ ಕೇಳಿ ಬೆಪ್ಪಾಗಿದ್ದಳು ಸೀತಾಲಕ್ಷ್ಮಿ. ಅವನೆಲ್ಲಿ? ಅವನಿಗಿಂತ ಹತ್ತು ವರ್ಷ ಚಿಕ್ಕವಳಾದ ತಾನೆಲ್ಲಿ? ಮನೆಯ ಉಣುಗೋಲು ದಾಟಿ ಆಚೆ ಹೋಗಿ ಗೊತ್ತಿಲ್ಲದವಳು ತಾನು. ಎಲ್ಲಿಗೆ ಬೇಕಾದರೂ ಹೋಗಿ ಬಂದು ಮನೆಯ ವೈವಾಟು ನೋಡಿಕೊಳ್ಳುವ ಬುದ್ಧಿವಂತ ಅವನು. ತನ್ನ ಕಿವಿಗೇ ಕೇಳದಷ್ಟು ಮೆತ್ತಗೆ ಮಾತಾಡುವವಳು ತಾನು. ಬಾಯಿ ಬಿಟ್ಟ ಅಂದರೆ ಎದುರಿದ್ದವರನ್ನು ಉಚ್ಚೆ ಹುಯ್ದುಕೊಳ್ಳುವಂತೆ ಮಾಡುವವನು ಅವನು. ಅಂದುಕೊಳ್ಳುವಾಗ ಸೀತಾಲಕ್ಷ್ಮಿಗೆ ಮತ್ತೊಂದು ವಿಪರೀತ ನೆನಪಾಗಿತ್ತು. ಗಂಟಲು ಜೋರು ಮಾಡಿದರೆ ಹೆಂಗಸರು ಹೆದರಿಬಿಡುತ್ತಾರೆ ಎಂದು ಬುದ್ಧಿವಂತ ಗಂಡಸರು ಅರ್ಥ ಮಾಡಿಕೊಂಡುಬಿಟ್ಟಿರುತ್ತಾರೆ. ಅದನ್ನೊಂದು ಅಸ್ತ್ರವನ್ನಾಗಿ ಉಪಯೋಗಿಸಿ ಹೆಂಗಸರನ್ನು ಹಣ್ಣು ಮಾಡಲು ಅವರಿಗೆ ಯಾವ ಮುಲಾಜೂ ಇಲ್ಲ. ಹಾವು ಹೆಡೆ ಬಿಚ್ಚಿ ಬುಸುಗುಟ್ಟಿ ಹೆದರಿಸಿದಂತೆ? ಹೋರಿ ಕೊಂಬು ತೋರಿಸಿ ಮರದ ಮೇಲಿನ ಮಂಗಣ್ಣ ಕೂಡಾ ಹಲ್ಲು ಕಿಸಿದು ಹೆದರಿಸುವುದನ್ನು ಕಲಿತುಬಿಟ್ಟಿರುತ್ತದೆ. ಹೆದರಿಸುವವರಿಗೆ ಈ ಕಲೆ ಕರಗತವಾದಂತೆ ಹೆದರುವವರೂ ಕೂಡಾ ಅಭ್ಯಾಸಬಲದಿಂದ ಹೆದರುತ್ತಾರಾ? ಅಥವಾ ವಾಸ್ತವವಾಗಿ ಹೆದರಿದಂತೆ ಬಾಯ್ಮುಚ್ಚಿಕೊಂಡಿರುವುದೂ ಅವಗಣನೆಯ, ತಿರಸ್ಕಾರದ ಮತ್ತೊಂದು ಮುಖ ಯಾಕಾಗಿರಬಾರದು? ಹಾಳುಬಿದ್ದು ಹೋಗಲಿ ಎನ್ನುವ ಧೋರಣೆ? 'ಕುತ್ತಿಗೆಗೊಂದು ಕುಂಟೆ' ಎನ್ನುವ ಮುಂದಾಲೋಚನೆಯಲ್ಲಿ, ಕೆಲವೊಮ್ಮೆ ದುರಾಲೋಚನೆಯಲ್ಲಿ ಕೂಡಾ. ಕಂಡವರ ಮನೆಯ ಹೆಣ್ಣುಮಕ್ಕಳನ್ನು ಮನೆ ತುಂಬಿಸಿಕೊಳ್ಳುವವರಿಂದ ಏನೆಲ್ಲಾ ನಿರೀಕ್ಷೆಗಳು? ದಾರಿ ತಪ್ಪಿದ ಮನೆಮಗನನ್ನು ಸರಿದಾರಿಗೆ ತರಬೇಕಾದ್ದು ತಾಳಿ ಕಟ್ಟಿಸಿಕೊಂಡವಳ ಕರ್ತವ್ಯ, ಜವಾಬ್ದಾರಿ. ಅವನು ಕುಡುಕನೋ, ಕೆಡುಕನೋ, ಕಳ್ಳನೋ, ಸುಳ್ಳನೋ ಏನೇ ಆಗಿರಲಿ, ಅವನಿಗೆ ಮೂಗುದಾರ ಹಾಕಬೇಕು ಹೆಂಡತಿ. ಆಗಲೇ ಅವಳ ಪತಿವ್ರತಾಧರ್ಮ ಪಾಲನೆಯಾಗುತ್ತಿರುವ ಸಾರ್ಥಕತೆ. ಅಬ್ಬಾ.

***

ಕಮಲಾ ಸಕೇಶಿಯಾಗಿದ್ದರಿಂದ ಅವಳಿಗೆ ಕೆಲವೊಂದು ಅನುಕೂಲಗಳಿದ್ದುವು. ಹಬ್ಬಹರಿದಿನ, ವ್ರತಾಚರಣೆಗಳ ಸಂದರ್ಭದಲ್ಲಿ ಅವಳು ಮುಟ್ಟಿದ ಅಡುಗೆ ದೇವರ ನೈವೇದ್ಯಕ್ಕೆ ಅನರ್ಹವಾದ್ದರಿಂದ ಆ ಸಮಯದಲ್ಲಿ ಅವಳು ಹೊರಹೊರಗೆ. ತನ್ನಮ್ಮನಂತೆ ಅವಳು ರಾತ್ರಿಯ ಊಟ ಬಿಟ್ಟು ಅವಲಕ್ಕಿ ಫಳಾರಕ್ಕೆ